**<u>ಸಾಕ್ಷಿಯನ್ನು ಪ್ರಮಾಣ ವಚನ ಬೋಧಿಸಲಾದ ದಿನಾಂಕಃ 13-02-2024.</u>**

**<u>ಮುಂದುವರೆದ ಪಾಟೀ ಸವಾಲುಃ 1 ರಿಂದ 7 ನೇ ಪ್ರತಿವಾದಿ ಪರ ಶ್ರೀ. ಬಿ ಕೆ ಆರ್ ವಕೀಲರಿಂದಃ</u>**

1. ನಾನು ಹಾಗೂ ನನ್ನ ಗಂಡ ಕೂಡಿಕೊಂಡು ನನ್ನ ತಾಯಿರವರಿಗೆ ಮೋಸ ಮಾಡಿ ಬಕ್ಷಿಸ ಪತ್ರ ಸೃಷ್ಟಿ ಮಾಡಿಕೊಂಡು ಸದರಿ ಆಸ್ತಿಯನ್ನು ಬೇರೆಯವರಿಗೆ ಮಾರಾಟ ಮಾಡಿದ್ದೇವೆ ಎಂದರೆ ಸರಿಯಲ್ಲ. ನಾನು ಹಾಗೂ ಪ್ರತಿವಾದಿ ನಂ.1 ರಿಂದ 10 ಎಲ್ಲರೂ ಬೇರೆ ಬೇರೆ ವಾಸ ಇರುತ್ತೇವೆ ಎಂದರೆ ನಿಜ. ಪ್ರತಿವಾದಿ ನಂ.11 ಇವರು ನನ್ನ ಅತ್ತೆ - ಇವರು ಸಹ ಬೇರೆ ವಾಸ ಇರುತ್ತಾರೆ. ನನಗೆ ಹಾಗೂ ಪ್ರತಿವಾದಿ ನಂ.11 ರವರಿಗೆ ಆರ್ ಎಸ್ ನಂ.146/3 ಆಸ್ತಿಗೆ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಆರ್ ಎಸ್ ನಂ.146/3 ಜಮೀನು ಪ್ರತಿವಾದಿ ನಂ.1 ರವರ ಗಂಡನ ಹೆಸರಿನಲ್ಲಿ ಮಂಜೂರು ಆದ ಜಮೀನು ಎಂದರೆ ಸರಿಯಲ್ಲ. ಸದರಿ ಆರ್ ಎಸ್ ನಂ.146/3 ರ ಕುರಿತು ಆದ ಡೈರಿ ಸಂಖ್ಯೆ ಗೊತ್ತಿಲ್ಲ. ಸದರಿ ಡೈರಿ ನಂ.2088 ಇದೆ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ. ಸದರಿ ಡೈರಿ ನಂ.2088 ನಿಪಿ.8 ದಾಖಲೆ ಆಗಿದೆ. ಸದರಿ ಆರ್ ಎಸ್ ನಂ.146/3 ಆಸ್ತಿಗೆ ನನಗೆ ಯಾವುದೇ ರೀತಿಯ ಹಿತಾಸಕ್ತಿ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಈ ದಾವೆಯಲ್ಲಿ ನಿಮ್ಮ ತಾಯಿಗೆ ಪಕ್ಷಗಾರ ಮಾಡಲು ನಿಮಗೆ ಅಡಚಣೆ ಇರಲಿಲ್ಲ ಎನ್ನುವ ಪ್ರಶ್ನೆಗೆ ಸಾಕ್ಷಿಯು ನನ್ನ ತಾಯಿಯು ಪಾಲು ಕೇಳಿ 2013 ರಲ್ಲಿ ಒಂದು ದಾವೆ ಸಲ್ಲಿಸಿದ್ದರು ಹಾಗೂ ಅದನ್ನು ವಾಪಸ್ಸು ಪಡೆದಿದ್ದಾರೆ ಎಂದು ನುಡಿಯುತ್ತಾರೆ. ನನ್ನ ತಾಯಿ ಸಲ್ಲಿಸಿದ್ದ ಸದರಿ ದಾವೆಯ ಸಂಖ್ಯೆಯು ಅಸಲ ದಾವಾ ನಂ.210/2013 ಎಂದರೆ ನಿಜ ಹಾಗೂ ಸದರಿ ದಾವೆಯನ್ನು ಖಾನಾಪೂರದ ಕಿರಿಯ ಶ್ರೇಣಿ ನ್ಯಾಯಾಲಯದಲ್ಲಿ ಸಲ್ಲಿಸಿದ್ದರು ಎಂದರೆ ನಿಜ. ನನ್ನ ತಾಯಿಯು ಸದರಿ

ದಾವೆಯನ್ನು ನನ್ನ ದೊಡ್ಡಮ್ಮ ಪ್ರತಿವಾದಿ ನಂ.1 ಹಾಗೂ ಅವರ ಮಕ್ಕಳ ವಿರುದ್ಧ ಸಲ್ಲಿಸಿದ್ದರು. ಸದರಿ ದಾವೆಯನ್ನು ನನ್ನ ತಾಯಿ ಈಗಾಗಲೆ ಆಸ್ತಿಗಳಲ್ಲಿ ಪಾಲು ಆಗಿದೆ ಎಂದು ಹೇಳಿ ದಾವೆಯನ್ನು ಹಿಂದಕ್ಕೆ ಪಡೆದಿದ್ದರು ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆಯ ಜೀವಂತ ಕಾಲದಲ್ಲಿ ಹಾಗೂ ಪ್ರತಿವಾದಿ ನಂ.1 ರವರ ಗಂಡ ಜೀವಂತ ಇರುವಾಗ ಬೆಳಗಾವಿಯ ಮೂರನೇ ಗೇಟ ಬಳಿ ಇರುವ ಹಾಗೂ ಕುಟುಂಬದ ಇನ್ನುಳಿದ ಆಸ್ತಿಗಳಲ್ಲಿ ಅವರ ನಡುವೆ ಪಾಲುವಾಟ್ನಿ ಮಾಡಿಕೊಂಡಿದ್ದರು ಎಂದರೆ ನಿಜ. ನಮ್ಮ ತಂದೆಯ ಪಾಲಿಗೆ ಬಂದಿರುವ ಆಸ್ತಿಗಳು ಇವೆ. ಸದರಿ ಆಸ್ತಿಗಳಿಗೆ ನನ್ನ ತಾಯಿಯ ಹೆಸರು ದಾಖಲು ಆಗಿದೆ. ನಮ್ಮ ತಂದೆ ತಾಯಿಗೆ ನಾನು ಮತ್ತು ನನ್ನ ತಮ್ಮ ಇಬ್ಬರು ಮಕ್ಕಳು. ನನ್ನ ತಮ್ಮ ಈಗ ಬೆಳಗಾವಿಯಲ್ಲಿ ಪ್ರತಿವಾದಿ ನಂ.1 ರವರ ಮನೆಯಲ್ಲಿ ಇದ್ದು ವಿದ್ಯಾಬ್ಯಾಸ ಮಾಡುತ್ತಿದ್ದಾರೆ ಎಂದರೆ ನಿಜ. ವಿದ್ಯಾಬ್ಯಾಸದ ಖರ್ಚು ಪ್ರತಿವಾದಿ ನಂ.1 ರವರ ಭರಿಸುತ್ತಿದ್ದಾರೆ ಎಂದರೆ ಇರಬಹುದು ನನಗೆ ಗೊತ್ತಿಲ್ಲ. ಈ ದಾವೆಯನ್ನು ಪ್ರತಿವಾದಿ ನಂ.1 ರಿಂದ 7 ರವರ ವಿರುದ್ಧ ಹಾಕಿ ಮಾಗಣಿ ಕೇಳಲು ಉಚಿತವಲ್ಲ ಎಂದರೆ ಸರಿಯಲ್ಲ.

**ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಗಾಗಿ ಕಾಲಾವಕಾಶ ಕೇಳಿದ್ದರಿಂದ ಪಾಟೀ ಸವಾಲಗಾಗಿ ಮುಂದುಡಲಾಯಿತು.**

**( ಈ ಮೇಲಿನ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಆಧರಿಸಿ ನಾನು ಹೇಳಿದಂತೆ ಬೆರಳಚ್ಚು ಮಾಡಲಾಯಿತು.)**

**ಓ.ಹೇ.ಕೇ. ಸರಿ ಅದೆ.**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ ಸಿ,**
**ಖಾನಾಪೂರ .**